ರಚನೆ, ಉಚ್ಚಾರ, ಶಬ್ದ ಪ್ರಯೋಗ ಇತ್ಯಾದಿಗಳ ವ್ಯತ್ಯಾಸ ವೈವಿಧ್ಯದಿಂದ ಅದೇನೂ ತೀರಾ ಸುಲಲಿತ ಮಾತುಕತೆಯೂ ಆಗಿರುವುದಿಲ್ಲ. ಯಾಕೆಂದರೆ, ಇಂಗ್ಲೆಂಡಿನ ಇಂಗ್ಲಿಷ್ ಮತ್ತು ಇಂಗ್ಲೆಂಡ್ ಹೊರಗಿನ ಇಂಗ್ಲಿಷ್ ಎರಡೂ ಒಂದೇ ಅಲ್ಲ. ತಾನು ಹೀಗೆ ಬಹುಮುಖಿ ಬಹುರೂಪಿ ಎನ್ನುವುದು ಇಂಗ್ಲಿಷ್‌ಗೆ ಗೊತ್ತೋ ಇಲ್ಲವೋ? ಆದರೆ ಅದನ್ನು ಬಳಸುವವರಿಗೆ ಗೊತ್ತಿರುವ, ಅಲ್ಲದಿದ್ದರೆ ಅನುಭವಕ್ಕೆ ಬರುವ ವಿಷಯವೇ. ಮತ್ತೆ ಇಂಗ್ಲೆಂಡ್ ಒಳಗಿನ ಇಂಗ್ಲಿಷ್ ಕೂಡ ಏಕಸ್ವರೂಪದ್ದಲ್ಲ. ಇಲ್ಲಿಯೂ ಉತ್ತರ ದಕ್ಷಿಣ ಕರಾವಳಿ, ಘಟ್ಟ ಬಯಲು, ಕಣಿವೆ ಪ್ರದೇಶಗಳ ಇಂಗ್ಲಿಷ್ ಎಂಬ ಭೇದ ಇದೆ. ಇಂಗ್ಲೆಂಡ್‌ನ ನೆರೆಯ ಸ್ಕಾಟಿಷರು, ವೆಲ್ಶ್ ಜನರು ಬಾಯಿ ಬಿಟ್ಟೊಡನೆ 'ಓಹೋ, ಈತ ಅಲ್ಲಿಯವನು' ಅಂತ ಹುಟ್ಟಾ ಕಟ್ಟಾ ಆಂಗ್ಲರು ಮನಸ್ಸಿನಲ್ಲಿ ಅಂದುಕೊಳ್ಳುವುದು ಇದೆ. ಅಂತಹವರ ಭಿನ್ನ ಉಚ್ಚಾರ ಬಳಕೆಗಳನ್ನು ಕಷ್ಟದಲ್ಲಿ ಸಹಿಸಿಕೊಳ್ಳುವುದಿದೆ. ಯುನೈಟೆಡ್ ಕಿಂಗ್‌ಡಮ್‌ನ ಭಾಗವಾದ ಸ್ಕಾಟ್ಲೆಂಡ್, ಐರ್ಲೆಂಡ್, ವೇಲ್ಸ್‌ಗಳ ವಿಷಯ ಬಿಡಿ, ಇಂಗ್ಲೆಂಡ್‌ನ ಒಳಗೂ ಇಂಗ್ಲಿಷ್ ಭಾಷೆಯಲ್ಲಿ ವ್ಯತ್ಯಾಸಗಳಿವೆ. ಹೊರಜಗತ್ತಿಗೆ ಕಾಣಿಸದಿರುವ ವ್ಯತ್ಯಾಸಗಳು. ಒಬ್ಬರು ಮಾತು ಆರಂಭಿಸಿದ ಕೂಡಲೇ ಅವರ ಹಿನ್ನೆಲೆ, ಶ್ರೇಣಿ, ಇಂತಹ ಶಾಲೆಯಲ್ಲಿ ಓದಿಬೆಳೆದಿರಬಹುದು, ಯಾವ ಪ್ರದೇಶದಿಂದ ಬಂದಿರಬಹುದು ಎಂದು ಅಳೆಯುವ ಸಂಪ್ರದಾಯಸ್ಥ ಆಂಗ್ಲರೂ ಇದ್ದಾರೆ. ಒಂದು ದೇಶ ಎಲ್ಲಿಂದಲೋ ಎರವಲು ಪಡೆದು ಪರಕೀಯ ಎನಿಸಿಕೊಂಡ ಭಾಷೆ, ದೀರ್ಘ ಕಾಲದ ಬಾಳ್ವೆ-ಬಳಕೆಯಲ್ಲಿ ಅಲ್ಲಿನ ಹೊಸ ಸ್ಥಳೀಯ ದೇಸಿ ಭಾಷೆಯೇ ಆಗಿ ಮಾರ್ಪಡುತ್ತದೆ. ಆ ಊರು ದೇಶದ ಸಂಸ್ಕೃತಿಯನ್ನೂ ಒಂದಿಷ್ಟು ಮೂಲ ಸಂಪ್ರದಾಯಗಳನ್ನು ಕಸಿಮಾಡಿಸಿಕೊಂಡು ಪ್ರಾದೇಶಿಕವಾಗಿ ಕಾಣಿಸಲಾರಂಭಿಸುತ್ತದೆ. ಹಾಗಾಗಿ ಶುದ್ಧ ಭಾರತೀಯರ ಶುದ್ಧ ಇಂಗ್ಲಿಷ್ ಸ್ವಚ್ಛ ಭಾರತೀಯ ಇಂಗ್ಲಿಷ್ ಆಗಿರುತ್ತದೆ. ಅದರಲ್ಲೂ ರಾಜ್ಯ ಜಿಲ್ಲೆಗಳ ಪ್ರಭೇದ ಇದೆ ಬಿಡಿ. ಹೀಗೆ ಅದೇ ಹೆಸರಿನವಾದರೂ, ಒಂದೇ ಎಂದು ಮೇಲ್ನೋಟಕ್ಕೆ ತೋರಿದರೂ ವಿಭಿನ್ನವಾದ ಎರಡು ಇಂಗ್ಲಿಷ್‌ಗಳು ಕೂಡ ಸಾಗರೋತ್ತರ ಸಹೋದ್ಯೋಗಿಗಳ ನಡುವೆ ಕೆಲ ದಿನಗಳ ಮಟ್ಟಿಗೆ ಆಯಾ ಭಾಷಾರೂಪವನ್ನು ಧರಿಸಿದ ವ್ಯಕ್ತಿಗಳ ಜೊತೆ ಬೆಂಗಳೂರಿನಲ್ಲಿ ಭೇಟಿಯಾದವು. ಬಹುಸಂಸ್ಕೃತಿ ಭಾಷೆ-ಜನರ ಬೆಂಗಳೂರಿಗೆ ಇಂತಹ ಭೇಟಿಗಳೇ ಶೋಭೆ ಬಿಡಿ. ಕೆಲವೊಮ್ಮೆ ಒಬ್ಬರು ಇನ್ನೊಬ್ಬರನ್ನು 'ಕ್ಷಮಿಸಿ' ಎಂದು ಕೇಳಿ ಮೊದಲು ಹೇಳಿದುದನ್ನು ಪುನರುಚ್ಚರಿಸಿಕೊಳ್ಳುವುದು, ಎದುರಿನವರು ಹೇಳಿದ್ದನ್ನು ನಿಧಾನವಾಗಿ ಗ್ರಹಿಸಿ ತಡವಾಗಿ ಉತ್ತರಿಸುವುದು ಪ್ರತಿಕ್ರಿಯಿಸುವುದು, ನಗುವಿನ ನಿರೀಕ್ಷೆ ಇರುವಲ್ಲಿ ನಗದೇ ಇರುವುದು, ಎಲ್ಲರೂ ನಕ್ಕರೆ ತಾವೂ ನಗುವುದು, ಇಂತಹವೆಲ್ಲ ಸಹಜವಾಗಿ ನಡೆದಿತ್ತು. ಒಂದೇ ಭಾಷೆಯನ್ನು ಮಾತಾಡುವ ವಿಭಿನ್ನ ಸಂಸ್ಕೃತಿಗಳ ಸಂವಹನದ ವೈಶಿಷ್ಟ್ಯ ಅದು.

ನಮ್ಮ ಮೂವರು ಸಹೋದ್ಯೋಗಿಗಳು ಕೆಲವು ದಿನ ಬೆಂಗಳೂರಿನಲ್ಲೇ ಕೆಲಸ ಮಾಡಿದರು. ಹೋಟೆಲಿನಲ್ಲಿ ಉಳಿದರು. ಬಹುಮಹಡಿ ವಸತಿಯ ಕಿಟಕಿಯ ಮೂಲಕ ಬೆಂಗಳೂರಿನ ಎತ್ತರೆತ್ತರದ ಕಟ್ಟಡ ಸೌಧಗಳನ್ನು ಕಂಡರು. ಐಷಾರಾಮಿ ಕಾರುಗಳೂ, ಬೇಡಿ ಕಾಡಿ ಅಲ್ಲದಿದ್ದರೆ ಏನೋ ಮಾರಿ ದಿನದೂಡುವವರು ಅದೇ ರಸ್ತೆಯನ್ನು ಹಂಚಿಕೊಂಡು ಅಪರಿಚಿತರಂತೆ ಹಾದುಹೋಗುವುದನ್ನು ಕುತೂಹಲದಿಂದ ಗಮನಿಸಿದರು. ತಡರಾತ್ರಿಗೂ ಬೆಳಗುವ ರಸ್ತೆಗಳನ್ನು ನೋಡಿದರು. ತಣ್ಣಗಿನ ನಿಶ್ಶಬ್ದ ಇಂಗ್ಲೆಂಡ್‌ನಿಂದ ಬಂದಿಳಿದು ಬಿರುಬಿಸಿಯಲ್ಲಿ ಕಿವಿ ಮೈಮನ ತುಂಬುವ ನಿರಂತರ ಸದ್ದುಗಳ ನಗರಿಗೆ ಹೊಂದಿಕೊಳ್ಳುವ ಯತ್ನ ಮಾಡಿದರು. ಸಮಯದ ವ್ಯತ್ಯಾಸದ ಕಾರಣಕ್ಕೆ ದೂರದೇಶದ ವಾಸದಲ್ಲಿ ಕಾಡುವ ನಿದ್ದೆಯ ಹೊಂದಾಣಿಕೆಗಾಗಿ ಕಷ್ಟಪಟ್ಟರು. ಅವರು, ನಿತ್ಯ ಬೆಳಿಗ್ಗೆ, ತಂಗಿದ ಹೋಟೆಲಿನಲ್ಲಿ ಬಿಸಿ ಮೆದು ಇಡ್ಲಿ, ದೋಸೆ, ಪರಾಟ ಇತ್ಯಾದಿ ತಿಂಡಿಗಳ ಯಥೇಚ್ಛ ಆಯ್ಕೆಗಳನ್ನು ಬೆರಗಿನಿಂದ ಸೇವಿಸಿ, ದೇಸಿ ಚಹಾ-ಕಾಫಿ ಕುಡಿದು ಟ್ಯಾಕ್ಸಿ ಹತ್ತಿ ಕಚೇರಿಗೆ ಹೊರಡುವವರು. ಮತ್ತೆ ಸಂಜೆ ಇನ್ನೊಂದು ಟ್ಯಾಕ್ಸಿ ಹತ್ತಿ ಜನ ವಾಹನ ದಟ್ಟಣೆಯ ಮಹಾನಗರದ ರಸ್ತೆಗಳ ಚಡಿಯಲ್ಲಿ ತಮ್ಮ ಕಾರಿಗಾಗುವಷ್ಟು ಮಾತ್ರ ಜಾಗ ಉಳಿದಿರುವುದನ್ನು ಭಯದಿಂದ ನೋಡುತ್ತಾ ಹೋಟೆಲು ಸೇರುವವರು. ಸಂಜೆ ಉದ್ದ ಗ್ಲಾಸಿನ ತುಂಬ